ದಿನಾಂಕಃ **08.07.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

ನನ್ನ ಗಾಯದ ಪ್ರಮಾಣ ಪತ್ರದಲ್ಲಿ ನಮೂದಾಗಿರುವಷ್ಟು ನನಗೆ ವಯಸ್ಸಾಗಿರುತ್ತದೆ ಎಂದರೆ ಸರಿ. ನಿಪಿ-5 ಮತ್ತು 6 ರಲ್ಲಿ ನನ್ನ ವಯಸ್ಸು 30 ಎಂದು ಬರೆದಿರುತ್ತಾರೆ ಎಂದರೆ ಸರಿ. ನನಗೆ ಬಿ.ಪಿ.ಎಲ್.ಕಾರ್ಡ್ ಇರುತ್ತದೆ ಎಂದರೆ ಸರಿ. ಸದರಿ ಬಿ.ಪಿ.ಎಲ್.ಕಾರ್ಡನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ನಾನು ಓಡಿಸುತ್ತಿದ್ದ ನೋಂದಣಿ ಸಂಖ್ಯೆ ಹೇಳಲಾಗುವುದಿಲ್ಲ. ನನಗೆ ತುರ್ತು ಕೆಲಸವಿದ್ದ ಕಾರಣ ನಾನು ಆಟೋ ನಿಲ್ಲಿಸಿ ತರಾತುರಿಯಲ್ಲಿ ಹೋಗುತ್ತಿದ್ದೆ ಎಂದರೆ ಸುಳ್ಳು. ಯಾವುದೇ ವಾಹನ ಬಸ್ ನಿಲ್ದಾಣಕ್ಕೆ ಬರುವಾಗ ನಿಧಾನಕ್ಕೆ ಬರುತ್ತದೆ ಎಂದರೆ ಸರಿಯಲ್ಲ. ಸದರಿ ಬಸ್ ಯಾವ ದಿಕ್ಕಿನಿಂದ ಬಂದಿರುತ್ತದೆ ಎಂದರೆ ಗೊತ್ತಿಲ್ಲ, ಸಾಕ್ಷಿಯು ಮುಂದುವರೆದು ನನಗೆ ಅಪಘಾತವಾದ ನಂತರ ಅಷ್ಟೊಂದು ನೆನಪಿನ ಶಕ್ತಿ ಇರಲಿಲ್ಲ. ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳು ನಿಮಗೆ ಗೊತ್ತೇ ಎಂದರೆ ಅಷ್ಟಾಗಿ ಗೊತ್ತಿಲ್ಲ. ಪ್ರಮಾಣ ಪತ್ರದಲ್ಲಿರುವ ವಿಚಾರಗಳು ನೀವು ತಿಳಿದುಕೊಂಡು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನಗೆ ಅಷ್ಟೊಂದು ಗೊತ್ತಾಗುವುದಿಲ್ಲ ಎನ್ನುತ್ತಾರೆ.

**2.** ಆಟೋ ಚಾಲಯಿಸಲು ನನಗೆ ಪರವಾನಗಿ ಇತ್ತು. ಯಾವ ಆರ್.ಟಿ.ಓ.ನಿಂದ ಪರವಾನಗಿ ಪಡೆದಿರುತ್ತೀರಾ ಎಂದರೆ ನನಗೆ ಗೊತ್ತಿಲ್ಲ. ನನಗೆ ರಸ್ತೆ ನಿಯಮಗಳು ಚೆನ್ನಾಗಿ ಗೊತ್ತಿರುವ ಕಾರಣ ಜೀಬ್ರಾ ಕ್ರಾಸ್ ಇರುವ ಕಡೆ ಮಾತ್ರ ರಸ್ತೆ ದಾಟಬೇಕು ಎಂದರೆ ಸರಿ. ಶ್ರೀರಂಗಪಟ್ಟಣದ ಬಸ್ ನಿಲ್ದಾಣಕ್ಕೆ ಮೈಸೂರಿನಿಂದ ಬಸ್ ಬಂದರೆ ನಿಲ್ದಾಣದ ಸಮೀಪ 3 ಹಂಪ್ಸ್ ಇರುತ್ತದೆ ಎಂದರೆ ಸರಿ. ರಸ್ತೆ ಉಬ್ಬು ಇರುವುದರಿಂದ ವಾಹನಗಳು ನಿಧಾನಕ್ಕೆ ಬರುತ್ತವೆ ಎಂದರೆ ಸರಿ. ಆ ಕಾರಣದಿಂದ ಬಸ್ ನಿಲ್ದಾಣದ ಒಳಗೆ ಬರುವ ವಾಹನಗಳು ನಿಧಾನಕ್ಕೆ ಬರುವುದು ಸಹಜ ಎಂದರೆ ಸರಿ. ಬಸ್ ನಿಧಾನವಾಗಿ ಬರುತ್ತಿದ್ದರೂ ನಾನೇ ಅಜಾಗರೂಕತೆಯಿಂದ ನಡೆದುಕೊಂಡು ಹೋಗಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಬಸ್ ನಗರ ಸಾರಿಗೆ ಬಸ್ ಆದ ಕಾರಣ ಕೇಳಿದ ಜಾಗದಲ್ಲೆಲ್ಲಾ ನಿಲ್ಲಿಸುತ್ತಾರೆ ಎಂದರೆ ಸರಿ. ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಅಪಘಾತವಾಗಿದ್ದರೆ ನನಗೆ ತೀವ್ರವಾದ ಗಾಯಗಳು ಆಗುತ್ತಿದ್ದವು ಎಂದರೆ ಸರಿಯಲ್ಲ. ನನಗೆ ಸಣ್ಣಪುಟ್ಟ ಗಾಯಗಳಾಗಿರುತ್ತವೆ

ಎಂದರೆ ಸರಿಯಲ್ಲ.

**3.** ಅಪಘಾತವಾದ ನಂತರ ನಾನು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ನಂತರದಲ್ಲಿ ಎನ್.ಎಂ.ಹೆಚ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನನಗೆ ಸಾಮಾನ್ಯ ಸ್ವರೂಪದ ಗಾಯವಾಗಿದ್ದು, ಇನ್ನೊಂದು ಗಾಯ ಮೂಗಿಗೆ ಆಗಿದ್ದು, ತಲೆಗೆ ಬೇರೆ ಗಾಯಗಳು ಆಗಿಲ್ಲ ಎಂದರೆ ಸರಿಯಲ್ಲ. ಸರ್ಕಾರಿ ಆಸ್ಪತ್ರೆಯಲ್ಲಿ ಬಿ.ಪಿ.ಎಲ್.ಕಾರ್ಡುದಾರರಿಗೆ ಉಚಿತವಾಗಿ ಚಿಕಿತ್ಸೆ ನೀಡುತ್ತಾರೆ ಎಂದರೆ ಸರಿ. ಹೆಚ್ಚು ಪರಿಹಾರ ಪಡೆಯುವ ಸಲುವಾಗಿ ಗಾಯ ಹಾಗೂ ಚಿಕಿತ್ಸೆ ಬಗ್ಗೆ ಸುಳ್ಳು ಮಾಹಿತಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಮಾಸಿಕವಾಗಿ ರೂ.22,000/- ಸಂಪಾದನೆ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ. ನಾನು ಅಪಘಾತಕ್ಕೂ ಮುಂಚೆ ಹೇಗೆ ಕೆಲಸ ಮಾಡುತ್ತಿದ್ದೆನೋ ಹಾಗೆಯೇ ಈಗಲೂ ಸಹ ಕೆಲಸ ಮಾಡುತ್ತಿದ್ದೇನೆ ಎಂದರೆ ಸುಳ್ಳು. ನನ್ನ ತಪ್ಪಿನಿಂದ ಅಪಘಾತವಾಗಿದ್ದರೂ ಸುಳ್ಳು ದೂರು ಕೊಟ್ಟು ವಿಮೆ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸುಳ್ಳು. ನಾನು ಚಿಕಿತ್ಸೆಗಾಗಿ ಒಳರೋಗಿಯಾಗಿ 10 ದಿನ ಆಸ್ಪತ್ರೆಗೆ ದಾಖಲಾಗಿಲ್ಲ ಹಾಗೂ 2 ಲಕ್ಷ ರೂ.ಗಳನ್ನು ಚಿಕಿತ್ಸೆಗಾಗಿ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿದ್ದ ಸಮಯದಲ್ಲಿ ಪ್ರತಿದಿನ 400/- ರೂ.ಗಳನ್ನು ಸಹಾಯಕನಿಗೆ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಹೊರರೋಗಿಯಾಗಿ ಚಿಕಿತ್ಸೆ ಪಡೆಯುವಾಗ ಒಂದು ಬಾರಿಗೆ ರೂ.4,000/- ಖರ್ಚು ಮಾಡಿಲ್ಲ ಎಂದರೆ ಸುಳ್ಳು. ಭವಿಷ್ಯದ ಚಿಕಿತ್ಸೆಗಾಗಿ 1 ಲಕ್ಷ ರೂ. ಅವಶ್ಯಕತೆ ಇಲ್ಲ ಎಂದರೆ ಸುಳ್ಳು. ಅಪಘಾತ ನನ್ನ ತಪ್ಪಿನಿಂದ ಆಗಿದ್ದು ವಿಮೆ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕಾಗಿ ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**